ಕತೆ

**ಅಲಕಾ ಕಟ್ಟೆಮನೆ**

# ಪುನರಪಿ ಜನನಂ



ಹೈವೇ ಮೇಲೆ ಸುಂಯ್ಯನೆ ಕಾರು ಓಡುತ್ತಿತ್ತು. ಅದಕ್ಕಿಂತ ಹೆಚ್ಚಿನ ವೇಗದಲ್ಲಿ ತಲೆಯಲ್ಲಿ ಯೋಚನೆಗಳು ನಾಗಾಲೋಟ ಗೈಯ್ಯುತ್ತಿದ್ದವು. ಬೆಳಂಬೆಳಗ್ಗೆ ಮಾಲಿಂಗ ಭಟ್ರು ಫೋನಲ್ಲಿ ಹೇಳಿದ್ದೇನು? ಯಾಕೆ? ಹೇಗೆ? ಎಂಬುದರ ಸುತ್ತಲೇ ತಲೆ ಗಿರ್ಕಿ ಹೊಡೆಯುತ್ತಿತ್ತು.

'ನಿಮ್ಮನೆ ಅಚ್ಚೆಕುಮಾರ ಮೊನ್ನಿಂದ್ಲೇ ನಾಪತ್ತೆ. ಯತ್ಲಾಗೋದ ಏನಾದ ಹೇಳಿ ತೆಳದ್ದಿಲ್ಲೆ' ಎಂದಷ್ಟೇ ಹೇಳಿದ್ದರು ಮಾಲಿಂಗ್ಭಟ್ರು. ಅದೇ ಊರಿನ ಪರಿಚಿತ ವಕೀಲ ಗಿರಿಧರನಿಗೆ ಬೆಳಗ್ಗೆಯೇ ಫೋನಾಯಿಸಿ, 'ಸ್ವಲ್ಪ ನೋಡು ಮಾರಾಯ' ಎಂದರೆ, 'ಅರೆ! ಭಟ್ರು ಹೇಳಿದ್ರಿಲ್ಯ? ಅಂವ ಅರೆಸ್ಟ್ ಆಜ! ಸ್ವಲ್ಪ ದೊಡ್ಡ ನಂಬ್ರ, ಯಾವುದಕ್ಕೂ ನೀನೆ ಬರವ್ವು ಇಲ್ಲಿ' ಎಂದಿಷ್ಟೇ ಹೇಳಿದ್ದ. ಹಾಗಿದ್ದರೆ ಮಾಲಿಂಗ ಭಟ್ಟರಿಗೆ ವಿಷಯ ಗೊತ್ತಿತ್ತು ಅಂತಾಯ್ತು. ಇಷ್ಟಕ್ಕೂ ಅರೆಸ್ಟ್ ಆಗುವಂಥದ್ದೇನಾಯಿತು ಎಂದು ಗಾಬರಿ ಬಿದ್ದು, ತುರ್ತಾಗಿ ಊರಿಗೆ ಹೋಗಬೇಕಾಗಿದೆ ಎಂದಷ್ಟೇ ಸುಜಿಗೆ ಹೇಳಿ, ಸಕ್ರೆಬೈಲಿನ ದಾರಿ ಹಿಡಿದಿದ್ದೆ.

★★★

ಅಚ್ಚೆಕುಮಾರ್!

ಅವನ ಬಗ್ಗೆ ಇಷ್ಟೊಂದು ಕಾಳಜಿ ತೆಗೆದುಕೊಳ್ಳಲು ಅವನು ನನ್ನ ಬಂಧು ಬಳಗ ಏನೇನೂ ಅಲ್ಲ, ಆದರೆ ಕೆಲವೊಮ್ಮೆ ಅವರೆಲ್ಲರಿಗಿಂತ ಹೆಚ್ಚು! ಬಿಹಾರದ ಯಾವುದೋ ಕುಗ್ರಾಮದಿಂದ ಬಂದಿರುವ